Akashvani : Bengaluru
National Bulletin In Kannada
07.11.2025 : 1310hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

07.11.2025 : 1310 hrs

**<><><><>**

ಮುಖ್ಯಾಂಶಗಳು

**೧. ವಂದೇ ಮಾತರಂ ದೇಶಭಕ್ತಿ ಗೀತೆ ರಾಷ್ಟ್ರೀಯ ಏಕತೆ ಮತ್ತು ದೇಶಭಕ್ತಿಯ ಸಂಕೇತ - ರಾಷ್ಟ್ರಪತಿ ದ್ರೌಪದಿ ಮುರ್ಮು**

**೨. "ವಂದೇ ಮಾತರಂ" ದೇಶಭಕ್ತಿ ಗೀತೆಯ ೧೫೦ ನೇ ವರ್ಷದ ಸ್ಮರಣಾರ್ಥ; ಅಂಚೆಚೀಟಿ ಮತ್ತು ನಾಣ್ಯವನ್ನು ಬಿಡುಗಡೆ ಮಾಡಿದ ಪ್ರಧಾನಿ ನರೇಂದ್ರ ಮೋದಿ**

**೩. ಬಿಹಾರ ವಿಧಾನ ಸಭೆಯ ಎರಡನೇ ಹಂತದ ಚುನಾವಣೆ ; ವಿವಿಧ ರಾಜಕೀಯ ಪಕ್ಷಗಳಿಂದ ಬಿರುಸಿನ ಪ್ರಚಾರ**

**೪. ಫಿಡೆ ಚೆಸ್ ವಿಶ್ವಕಪ್ ೨೦೨೫; ಎರಡನೇ ಸುತ್ತಿನ ಟೈಬ್ರೇಕ್‌ನಲ್ಲಿ ಆಡಲಿರುವ ಭಾರತೀಯ ಆಟಗಾರರು**

**<><><><>**

ರಾಷ್ಟ್ರಪತಿ ದ್ರೌಪದಿ ಮುರ್ಮು ಭಾರತದ ದೇಶಭಕ್ತಿ ಗೀತೆ ವಂದೇ ಮಾತರಂನ ೧೫೦ ನೇ ವಾರ್ಷಿಕೋತ್ಸವವನ್ನು ಸ್ಮರಿಸಿದ್ದಾರೆ. ಇದನ್ನು ರಾಷ್ಟ್ರೀಯ ಏಕತೆ ಮತ್ತು ದೇಶಭಕ್ತಿಯ ಸಂಕೇತ ಎಂದು ಅವರು ಬಣ್ಣಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ, ರಾಷ್ಟ್ರಪತಿಗಳು, "ಹತ್ತೊಂಬತ್ತನೇ ಶತಮಾನದಲ್ಲಿ, ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರು ಬ್ರಿಟಿಷ್ ಆಳ್ವಿಕೆಯ ವಿರುದ್ಧದ ದಂಗೆಯ ಹಿನ್ನೆಲೆಯಲ್ಲಿ ಅಮರ ಗೀತೆ ವಂದೇ ಮಾತರಂ ಅನ್ನು ರಚಿಸಿದರು, ಇದು ೧೯೦೫ ರ ಸ್ವದೇಶಿ ಚಳವಳಿಯ ಕಾಲದಿಂದಲೂ ಎಲ್ಲರಿಗೂ ಸ್ಫೂರ್ತಿಯ ಮೂಲವಾಗಿದೆ. ಅಂದಿನಿಂದ, ಭಾರತ ಮಾತೆಗೆ ಗೌರವ ಸಲ್ಲಿಸುವ ಈ ಗೀತೆ ನಮ್ಮ ದೇಶವಾಸಿಗಳ ಭಾವನಾತ್ಮಕ ಪ್ರಜ್ಞೆ ಮತ್ತು ಏಕತೆಯ ಘೋಷಣೆಯಾಗಿ ಉಳಿದಿದೆ ಮತ್ತು ಹಾಗೆಯೇ ಮುಂದುವರಿಯುತ್ತದೆ." "ಸ್ವಾತಂತ್ರ್ಯದ ನಂತರ, ದೇಶವು ಇದನ್ನು ದೇಶಭಕ್ತಿ ಗೀತೆಯಾಗಿ ಭಕ್ತಿಪೂರ್ವಕವಾಗಿ ಅಳವಡಿಸಿಕೊಂಡಿದೆ. ಈ ಹಾಡಿಗೆ ೧೫೦ ವರ್ಷಗಳು ಪೂರ್ಣಗೊಂಡ ಈ ಅದ್ಭುತ ಸಂದರ್ಭದಲ್ಲಿ, ಈ ಹಾಡಿನ ಆಶಯಕ್ಕೆ ಅನುಗುಣವಾಗಿ ಭಾರತಮಾತೆಯನ್ನು ನಾವೆಲ್ಲರೂ ಪೂಜಿಸಿ ಪ್ರಾರ್ಥಿಸೋಣ ಎಂಬ ದೃಢ ಸಂಕಲ್ಪವನ್ನು ನಾವೆಲ್ಲರೂ ದೇಶವಾಸಿಗಳಾಗಿ ತೆಗೆದುಕೊಳ್ಳೋಣ. ವಂದೇ ಮಾತರಂ!" ಎಂದು ಅವರು ಹೇಳಿದರು. ವಂದೇ ಮಾತರಂ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಭಾರತೀಯರಿಗೆ ಸ್ಫೂರ್ತಿ ನೀಡುವುದಲ್ಲದೆ, ಹೆಮ್ಮೆ, ಸಮರ್ಪಣೆ ಮತ್ತು ದೇಶಭಕ್ತಿಯ ಮನೋಭಾವದ ಮೂಲವಾಗಿಯೂ ಕಾರ್ಯನಿರ್ವಹಿಸುತ್ತಿದೆ ಎಂದು ರಾಷ್ಟ್ರಪತಿ ಹೇಳಿದರು ಭಾರತದಾದ್ಯಂತ, ೧೫೦ ನೇ ವಾರ್ಷಿಕೋತ್ಸವವನ್ನು ಸಾಂಸ್ಕೃತಿಕ ಕಾರ್ಯಕ್ರಮಗಳು, ಶಾಲಾ ಚಟುವಟಿಕೆಗಳು ಮತ್ತು ಸಾರ್ವಜನಿಕ ಸ್ಮರಣಾರ್ಥಗಳೊಂದಿಗೆ ಆಚರಿಸಲಾಗುತ್ತಿದೆ. ಈ ನಡುವೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಂದೇ ಮಾತರಂ ಅನ್ನು ರಾಷ್ಟ್ರೀಯತೆಯ ಚೈತನ್ಯವನ್ನು ಜಾಗೃತಗೊಳಿಸುವ ಮತ್ತು ಪೀಳಿಗೆಗೆ ಸ್ಫೂರ್ತಿ ನೀಡುವ ಕಾಲಾತೀತ ಗೀತೆ ಎಂದು ಬಣ್ಣಿಸಿದ್ದಾರೆ.

**<><><><>**

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ದೇಶಭಕ್ತಿ ಗೀತೆ "ವಂದೇ ಮಾತರಂ" ನ ೧೫೦ ವರ್ಷಗಳ ಸ್ಮರಣಾರ್ಥ ಒಂದು ವರ್ಷವಿಡೀ ನಡೆಯುವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಸ್ಮರಣಾರ್ಥ ಅಂಚೆಚೀಟಿ ಮತ್ತು ನಾಣ್ಯವನ್ನು ಬಿಡುಗಡೆ ಮಾಡಿದರು. ಅವರು "ವಂದೇ ಮಾತರಂ ೧೫೦. ಇನ್ " ಪೋರ್ಟಲ್ ಅನ್ನು ಸಹ ಬಿಡುಗಡೆ ಮಾಡಿದರು, ಇಲ್ಲಿ ನಾಗರಿಕರು ರಾಷ್ಟ್ರೀಯ ಗೀತೆಯನ್ನು ಹಾಡುವ ವೀಡಿಯೊಗಳನ್ನು ಅಪ್‌ಲೋಡ್ ಮಾಡಬಹುದು ಮತ್ತು ಪ್ರಮಾಣಪತ್ರವನ್ನು

ಪಡೆಯಬಹುದು.ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ವಂದೇ ಮಾತರಂ ಒಂದು ಮಂತ್ರ, ಒಂದು ಶಕ್ತಿ, ಒಂದು ಕನಸು ಮತ್ತು ಒಂದು ಸಂಕಲ್ಪ ಎಂದು ಹೇಳಿದರು. ಇದನ್ನು ಭಾರತ ಮಾತೆಯ ಭಕ್ತಿ ಮತ್ತು ಆರಾಧನೆ ಎಂದು ಶ್ಲಾಘಿಸಿದರು, ಇದು ಇತಿಹಾಸಕ್ಕೆ ಹಿಂತಿರುಗಿ ಕರೆದೊಯ್ಯುತ್ತದೆ, ವರ್ತಮಾನವನ್ನು ಆತ್ಮ ವಿಶ್ವಾಸದಿಂದ ತುಂಬುತ್ತದೆ ಮತ್ತು ಯಾವುದೇ ಸಂಕಲ್ಪವನ್ನು ಪೂರೈಸಬಹುದು ಮತ್ತು ಸಾಧಿಸಲಾಗದ ಯಾವುದೇ ಗುರಿಯಿಲ್ಲ ಎಂಬ ಧೈರ್ಯವನ್ನು ಭವಿಷ್ಯಕ್ಕೆ ತುಂಬುತ್ತದೆ. ಹೃದಯವನ್ನು ಕಲಕುವ ಅಭಿವ್ಯಕ್ತಿಯನ್ನು ಮೀರಿದ ಅನುಭವವಾಗಿ ವಂದೇ ಮಾತರಂನ ಸಾಮೂಹಿಕ ಗಾಯನವನ್ನು ಅವರು ಶ್ಲಾಘಿಸಿದರು. ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರು ಹಾಡಿನ ಮೂಲಕ ಸ್ವತಂತ್ರ, ಮತ್ತು ಸಮೃದ್ಧ ಭಾರತಕ್ಕಾಗಿ ಸ್ಪಷ್ಟ ಕರೆಯನ್ನು ಪ್ರಾರಂಭಿಸಿದರು ಎಂದು ಶ್ರೀ ಮೋದಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ, ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮತ್ತು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಕೂಡ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಶೇಖಾವತ್, ವಂದೇ ಭಾರತ್ ಕೇವಲ ಒಂದು ಹಾಡಲ್ಲ, ರಾಷ್ಟ್ರೀಯತೆಯ ಅಭಿವ್ಯಕ್ತಿ ಎಂದು ಹೇಳಿದರು. ವಂದೇ ಮಾತರಂ ಗೀತೆಯು 'ಏಕ್ ಭಾರತ್ ಶ್ರೇಷ್ಠ ಭಾರತ್' ನ ಮಂತ್ರವಾಗಿ ಕಾರ್ಯನಿರ್ವಹಿಸುತ್ತಾ ೧೪೦ ಕೋಟಿ ಭಾರತೀಯರ ಶಕ್ತಿಯನ್ನು ಸೆರೆಹಿಡಿಯುತ್ತಾ ಇಂದಿಗೂ ಪ್ರಸ್ತುತವಾಗಿದೆ ಎಂದು ಅವರು ಹೇಳಿದರು. ಈ ಆಚರಣೆಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ "ವಂದೇ ಮಾತರಂ" ನ ಪೂರ್ಣ ಆವೃತ್ತಿಯ ಸಾಮೂಹಿಕ ಗಾಯನವನ್ನು ನಡೆಸಲಾಗುತ್ತದೆ, ಸಮಾಜದ ಎಲ್ಲಾ ವರ್ಗಗಳ ಜನರ ಉತ್ಸಾಹಭರಿತ ಭಾಗವಹಿಸುವಿಕೆಯೂ ಸೇರಿದೆ.

<><><>

'ವಂದೇ ಮಾತರಂ' ಗೀತೆಯು ಕೇವಲ ಪದಗಳ ಸಂಗ್ರಹವಲ್ಲ, ಬದಲಾಗಿ "ಭಾರತದ ಆತ್ಮದ ಧ್ವನಿ" ಎಂದು ಹೇಳಿದ್ದಾರೆ. ದೇಶವು ಐತಿಹಾಸಿಕ ದೇಶ ಭಕ್ತಿ ಗೀತೆಯ ೧೫೦ ನೇ ಸ್ಮರಣಾರ್ಥ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಸಾಮಾಜಿಕ ಮಾಧ್ಯಮದಲ್ಲಿ ಶಾ ಅವರು ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಈ ಹಾಡು ರಾಷ್ಟ್ರವನ್ನು ಒಗ್ಗೂಡಿಸುವಲ್ಲಿ ಐತಿಹಾಸಿಕ ಪಾತ್ರವನ್ನು ವಹಿಸಿದೆ ಮತ್ತು ಇಂದಿಗೂ ಯುವಕರಲ್ಲಿ ಹೆಮ್ಮೆ ಮತ್ತು ದೇಶಭಕ್ತಿಯ ಭಾವನೆಯನ್ನು ಪ್ರೇರೇಪಿಸುತ್ತಿದೆ ಎಂದು ಹೇಳಿದರು. "ವಂದೇ ಮಾತರಂ ಕೇವಲ ಪದಗಳ ಸಂಗ್ರಹವಲ್ಲ; ಇದು ಭಾರತದ ಆತ್ಮದ ಧ್ವನಿಯಾಗಿದೆ. ಇಂಗ್ಲಿಷ್ ಆಡಳಿತದ ವಿರುದ್ಧ, 'ವಂದೇ ಮಾತರಂ' ರಾಷ್ಟ್ರವನ್ನು ಒಂದುಗೂಡಿಸಿತು ಮತ್ತು ಸ್ವಾತಂತ್ರ್ಯದ ಪ್ರಜ್ಞೆಯನ್ನು ಬಲಪಡಿಸಿತು. ಅದೇ ಸಮಯದಲ್ಲಿ, ಇದು ಕ್ರಾಂತಿಕಾರಿಗಳಲ್ಲಿ ಮಾತೃಭೂಮಿಗಾಗಿ ಅಚಲವಾದ ಸಮರ್ಪಣೆ, ಹೆಮ್ಮೆ ಮತ್ತು ತ್ಯಾಗದ ಮನೋಭಾವವನ್ನು ಜಾಗೃತಗೊಳಿಸಿತು" ಎಂದು ಶಾ ಹೇಳಿದ್ದಾರೆ. ಈ ಹಾಡು "ದೇಶವಾಸಿಗಳ ಹೃದಯಗಳಲ್ಲಿ ರಾಷ್ಟ್ರೀಯತೆಯ ಶಾಶ್ವತ ದೀಪವನ್ನು ಬೆಳಗಿಸುತ್ತಿದೆ" ಮತ್ತು ಏಕತೆ ಮತ್ತು ನವೀಕೃತ ಶಕ್ತಿಯ ಮೂಲವಾಗಿ ಉಳಿದಿದೆ ಎಂದು ಅವರು ಹೇಳಿದರು. ಈ ಸಂದರ್ಭವನ್ನು ಸ್ಮರಿಸಲು ನಾಗರಿಕರಿಗೆ ಕರೆ ನೀಡುತ್ತಾ, ಶಾ ಅವರು ತಮ್ಮ ಕುಟುಂಬಗಳೊಂದಿಗೆ ಹಾಡಿನ ಪೂರ್ಣ ಆವೃತ್ತಿಯನ್ನು ಹಾಡಲು ಕರೆ ನೀಡಿದ್ದಾರೆ. ಏತನ್ಮಧ್ಯೆ, ದೆಹಲಿ ವಿಧಾನಸಭೆಯು 'ವಂದೇ ಮಾತರಂ' ಹಾಡಿನ ೧೫೦ ನೇ ವಾರ್ಷಿಕೋತ್ಸವವನ್ನು ಸಂಭ್ರಮಿಸಲು ಭವ್ಯ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ನಡುವೆ ಬೆಂಗಳೂರಿನ ಕೇಂದ್ರೀಯ ರೇಷ್ಮೆ ಮಂಡಳಿಯಲ್ಲಿ ನಡೆದ ದೇಶಭಕ್ತಿಗೀತೆ ವಂದೇ ಮಾತರಂ ೧೫೦ನೇ ವರ್ಷದ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಸಿಬ್ಬಂದಿ ಸಾಮೂಹಿಕವಾಗಿ ಈ ಗೀತೆಯನ್ನು ಹಾಡಿದರು.

<><><>

ಬಿಹಾರ ವಿಧಾನಸಭೆಯ ಎರಡನೇ ಮತ್ತು ಅಂತಿಮ ಚುನಾವಣಾ ಪ್ರಚಾರವು ಮತ್ತಷ್ಟು ವೇಗವನ್ನು ಪಡೆದಿದೆ. ಎನ್‌ಡಿಎ ಮತ್ತು ಮಹಾಘಟಬಂಧನ್‌ನ ಹಿರಿಯ ನಾಯಕರ ಜೊತೆಗೆ, ಇತರ ಪಕ್ಷಗಳ ನಾಯಕರು ಪ್ರಚಾರದಲ್ಲಿ ತೊಡಗಿದ್ದಾರೆ. ಸೀಮಾಂಚಲ್, ಮಗಧ್, ಶಹಾಬಾದ್ ಮತ್ತು ಚಂಪಾರಣ್ ಪ್ರದೇಶಗಳ ಜಿಲ್ಲೆಗಳಲ್ಲಿ, ವಿವಿಧ ಪಕ್ಷಗಳ ಹಿರಿಯ ನಾಯಕರು ಚುನಾವಣಾ ಪ್ರಚಾರಗಳನ್ನು ನಡೆಸುತ್ತಿದ್ದಾರೆ. ವಿಧಾನಸಭಾ ಚುನಾವಣೆ ಎರಡನೇ ಮತ್ತು

ಅಂತಿಮ ಹಂತದಲ್ಲಿದ್ದು ನವೆಂಬರ್ ೧೧ ರಂದು ೨೦ ಜಿಲ್ಲೆಗಳ ೧೨೨ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ, ಮತ ಎಣಿಕೆ ನವೆಂಬರ್ ೧೪ ರಂದು ನಡೆಯಲಿದೆ.

<><><><>

ಪ್ರಧಾನಿ ನರೇಂದ್ರ ಮೋದಿ ಇಂದು ಸಂಜೆ ವಾರಣಾಸಿಗೆ ಭೇಟಿ ನೀಡಲಿದ್ದಾರೆ. ಅವರನ್ನು ಉತ್ತರ ಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಳ್ಳಲಿದ್ದಾರೆ. ಪ್ರಧಾನಿ ನಾಳೆ ಬೆಳಿಗ್ಗೆ ಬನಾರಸ್-ಖಜುರಾಹೊ ಮತ್ತು ಲಕ್ನೋ-ಸಹಾರನ್‌ಪುರ ಸೇರಿದಂತೆ ನಾಲ್ಕು ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

<><><><>

ಉಡುಪಿ ಪರ್ಯಾಯ ಶ್ರೀ ಪುತ್ತಿಗೆ ಮಠ, ಶ್ರೀಕ್ರಷ್ಣ ಮಠದಲ್ಲಿ ಗೀತಾ ಜಯಂತಿ ಅಂಗವಾಗಿ ನಾಳೆಯಿಂದ ಡಿಸೆಂಬರ್ ೭ರವರೆಗೆ ಬೃಹತ್ ಗೀತೋತ್ಸವ-ಗೀತಾ ಮಾಸೋತ್ಸವ ನಡೆಯಲಿದ್ದು, ಇದೇ ೨೮ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಶ್ರೀ ಪುತ್ತಿಗೆ ಮಠಾಧೀಶ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಮಾಹಿತಿ ನೀಡಿದ್ದಾರೆ.

<><><><>

ಗೋವಾದಲ್ಲಿ ನಡೆಯಲಿರುವ ಈ।ಆಇ ಚೆಸ್ ವಿಶ್ವಕಪ್ ೨೦೨೫ ರಲ್ಲಿ, ಮೂರನೇ ಸುತ್ತಿನಲ್ಲಿ ಸ್ಥಾನ ಪಡೆಯಲು ಇಂದು ಎರಡನೇ ಸುತ್ತಿನ ಟೈಬ್ರೇಕ್‌ಗಳಲ್ಲಿ ಎಂಟು ಭಾರತೀಯರು ಆಡಲಿದ್ದಾರೆ. ಆರ್. ಪ್ರಜ್ಞಾನಂದ, ವಿದಿತ್ ಗುಜರಾತಿ, ನಿಹಾಲ್ ಸರಿನ್, ಪ್ರಣವ್ ವಿ, ಎಸ್.ಎಲ್. ನಾರಾಯಣನ್, ಕಾರ್ತಿಕೇಯನ್ ಮುರಳಿ, ಪ್ರಾಣೇಶ್ ಎಂ, ಮತ್ತು ರೌನಕ್ ಸಾಧ್ವನಿ. ಡಿ. ಗುಕೇಶ್, ಅರ್ಜುನ್ ಎರಿಗೈಸಿ, ಪೆಂಟಾಲ ಹರಿಕೃಷ್ಣ, ದಿಪ್ತಾಯನ್ ಘೋಷ್ ಮತ್ತು ಕಾರ್ತಿಕ್ ವೆಂಕಟರಾಮನ್ ತಮ್ಮ ಪಂದ್ಯಗಳನ್ನು ಗೆದ್ದ ನಂತರ ಈಗಾಗಲೇ ಮೂರನೇ ಸುತ್ತಿನಲ್ಲಿ ಆಡಲಿದ್ದಾರೆ.

<><><><>

ಇಂದು ಭಾರತೀಯ ಹಾಕಿಯ ೧೦೦ನೇ ವರ್ಷದ ಆಚರಣೆ ದೇಶಾದ್ಯಂತ ನಡೆಯಲಿದೆ. ಶತಮಾನೋತ್ಸವದ ಅಂಗವಾಗಿ ೫೫೦ ಜಿಲ್ಲೆಗಳಲ್ಲಿ ೧೪೦೦ ಕ್ಕೂ ಹೆಚ್ಚು ಪಂದ್ಯಗಳು ನಡೆಯಲಿವೆ. ಮುಖ್ಯ ಕಾರ್ಯಕ್ರಮವು ನವದೆಹಲಿಯ ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬೆಳಿಗ್ಗೆ ೦೮:೩೦ ರಿಂದ ನಡೆಯಲಿದ್ದು, ಭಾರತೀಯ ಹಾಕಿಯ ಅದ್ಭುತ ಪ್ರಯಾಣದ ಸಾರವನ್ನು ಸೆರೆಹಿಡಿಯುವ ವಿಶೇಷ ಕಾರ್ಯಕ್ರಮಗಳ ಸರಣಿಯನ್ನು ಒಳಗೊಂಡಿದೆ.

<><><><>

ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಕ್ಯಾರಾರಾ ಓವಲ್‌ನಲ್ಲಿ ನಡೆದ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ನಾಲ್ಕನೇ ಟಿ-೨೦ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾರತ ೪೮ ರನ್‌ಗಳಿಂದ ಗೆಲುವು ಸಾಧಿಸಿದೆ. ಐದು ಪಂದ್ಯಗಳ ಸರಣಿಯಲ್ಲಿ ಭಾರತ ೨-೧ ಅಂತರದಿಂದ ಮುನ್ನಡೆ ಸಾಧಿಸಿದೆ. ಕೊನೆಯ ಹಾಗೂ ೫ನೇ ಟಿ-೨೦ ಪಂದ್ಯ ಇದೇ ೮ ರಂದು ಆಸ್ಟ್ರೇಲಿಯಾದ ಗಬ್ಬಾ ಕ್ರೀಡಾಂಗಣದಲ್ಲಿ ನಡೆಯಲಿದೆ.

<><><><>

ಅಮೆರಿಕದಲ್ಲಿರುವ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಅವರು ಇಂದು ವಾಷಿಂಗ್ಟನ್‌ನ ವಿದೇಶಾಂಗ ಇಲಾಖೆಯಲ್ಲಿ ದಕ್ಷಿಣ ಮತ್ತು ಮಧ್ಯ ಏಷ್ಯಾ ವ್ಯವಹಾರಗಳ ಸಹಾಯಕ ವಿದೇಶಾಂಗ ಕಾರ್ಯದರ್ಶಿ ಪಾಲ್ ಕಪೂರ್ ಅವರನ್ನು ಭೇಟಿಯಾದರು. ಸೋಮವಾರ ರಾಯಭಾರಿಯ ನಿವಾಸದಲ್ಲಿ ನಡೆದ ಚರ್ಚೆಯ ನಂತರ ನಾಲ್ಕು ದಿನಗಳಲ್ಲಿ ಇದು ಅವರ ಎರಡನೇ ಸಭೆಯಾಗಿತ್ತು.

**<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>**

**<><> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <><>**